ಅಧ್ಯಕ್ಷರು : ಪುಟ್ಟಣಯ್ಯನವರೇ ಕಬ್ಬಿನ ಬಗ್ಗೆ ಪ್ರಸ್ತಾಪಿಸಬೇಕಾಗಿರುವ ವಿಚಾರ ಇವತ್ತು ಬೇಡ, ಸೋಮವಾರ, ಮಂಗಳವಾರ ತೆಗೆದುಕೊಳ್ಳೋಣ.

ಹೆಜ್ಜಾಲ ಗೋಲಿಬಾರ ಘಟನೆ ಕುರಿತು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಈ ವರ್ಷದ ಪ್ರಾರಂಭದಲ್ಲಿ ನಡೆದಂತಹ ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಆರು ತಿಂಗಳು ಕಳೆದರೂ ಇದುವರೆಗೂ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುವ ಅಧಿಸೂಚನೆಯಾಗಲಿ ಅಥವಾ ಯಾವ ನ್ಯಾಯಧೀಶರನ್ನು ನೇಮಕ ಮಾಡಿದ್ದಾರೆಂಬ ಬಗ್ಗೆ ಮಾಹಿತಿ ಇಲ್ಲ, ಆರು ತಿಂಗಳಾದರೂ ಅಪರಾಧಿಗಳ ಮೇಲೆ ಚಾರ್ಜ್‌ಶೀಟ್ ಕೂಡ ಹಾಕಿಲ್ಲ. ಏಕೆ? ಇದರಿಂದ ಪೋಲೀಸರು ದಿನಾಬೆಳಗಾದರೆ ಯಾರು ಅಪರಾಧಿಗಳಿದ್ದಾರೆ ಅವರನ್ನು ಹಿಡಿದುಕೊಂಡು ಬರುತ್ತಿದ್ದಾರೆ ನ್ಯಾಯಾಂಗ ತನಿಖೆ ಎಲ್ಲಿ, ಯಾವಾಗ ಕಾರ್ಯಾರಂಭ ಮಾಡುತ್ತದೆಂದು ಸರ್ಕಾರ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಾಗಿ ಹೇಳಿದ್ದು ನಿಜ. ನ್ಯಾಯಾಂಗ ತನಿಖೆಗೆ ಒಪ್ಪಿಸಿಯಾಗಿದೆ, ಜಸ್ಟಿಸ್ ಹಿರೇಮಠ ಅವರನ್ನು ಇದರ ಬಗ್ಗೆ ತನಿಖಾಧಿಕಾರಿಯಾಗಿ ನೇಮಕ ಮಾಡಿದ್ದೇವೆ. ಈ ಬಗ್ಗೆ ಅಧಿಸೂಚನೆ ಹೊರಬಿದ್ದು ಮೂರು ವಾರಗಳಾಯಿತು. ಇನ್ನು ಅವರು ಕೆಲಸಕಾರ್ಯಗಳನ್ನು ಮಾಡುತ್ತಾರೆ. ಇನ್ನು ಅಲ್ಲಿ ಕೇಸ್‌ಗಳನ್ನು ಹಾಕುತ್ತಿರುವ ಬಗ್ಗೆ. ಕೆಲವು ಪ್ರಕರಣಗಳು ಇನ್ನೂ ತನಿಖೆ ಹಂತದಲ್ಲಿವೆ ಕೆಲವೊಂದರಲ್ಲಿ ಅಪರಾಧಿಗಳ ಮೇಲೆ ಕೇಸ್‌ಗಳನ್ನು ಹಾಕುತ್ತಿದ್ದಾರೆ. ಈ ಕೆಲಸ ನಾವು ಮುಂದುವರೆಸುತ್ತಿದ್ದೇವೆ.

ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಈ ಸದನದಲ್ಲಿ ಹತ್ತಾರು ಬಾರಿ ಶಿಕಾರಿಪುರ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಎಲ್ಲೂ ಕಣದಷ್ಟು ವಿದ್ಯುತ್ ಅಭಾವ ಕಾಡುತ್ತಿದೆ. ಸಾಗರದಿಂದ ಸೊರಬವರೆಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಐದು ವರ್ಷವಾಗಿದೆ. ಒಂದಲ್ಲ ಒಂದು ಕಾರಣಕ್ಕೆ ಆ ಕೆಲಸ ಕುಂಟುತ್ತಿದೆ. ಅದು ಮುಗಿದರೆ ಶಿರಾಳಕೊಪ್ಪದ ಅರ್ಧ ಹೋಬಳಿಗೆ ವಿದ್ಯುತ್ ಅನುಕೂಲವಾಗುತ್ತದೆ ಎಂದು ನಾನು ಹತ್ತಾರು ಬಾರಿ ಇಲ್ಲಿ ವಿನಂತಿ ಮಾಡಿದ್ದೆ. ಅರಣ್ಯ ಇಲಾಖೆಯವರಿಂದ ಕ್ಲಿಯರೆನ್ಸ್ ಸಿಗಲಿಲ್ಲ ಅಂದರು, ಕೆಇಬಿ ಚೇರ್ಮನ್‌ಗೆ ಹೇಳಿದೆವು, ಅವರು ದುಡ್ಡು ಕಟ್ಟಿದ್ದಾರೆ ಇಷ್ಟಾದರೂ ಸಹ ಹೋದ ಸಲ ಈ ವರ್ಷದ ಏಪ್ರಿಲ್ ಮೇ ಒಳಗೆ ಮುಗಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು ಅದನ್ನು ಕಾರ್ಯಗತಗೊಳಿಸಿಲ್ಲ. ನಮ್ಮ ತಾಲ್ಲೂಕಿನ ಜನ ಬೆಳಕಿನಲ್ಲಿರುವುದಕ್ಕೆ ಈ ಸಲ ಮುಗಿಸಿ ಏನಾದರೂ ಮಾಡುವುದಕ್ಕಾಗುತ್ತದೆ? ಜೋಗ್‌ನಿಂದ ಅಷ್ಟು ಹತ್ತಿರದಲ್ಲಿದ್ದರೂ ಈ ದುಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಎರಡನೆಯದು ಶಿಕಾರಿಪುರಕ್ಕೆ 110 ಕೆವಿ ಸ್ಟೇಷನ್ ಹೋದ